

ತಮಿಳುನಾಡಿನ ಕೋಯಂಬೀಡು ಸಿಟಿಯ ಸ್ಮಶಾನದ ಆಚೆಯ ಗೋಡೆಗೆ ಅಂಟಿಕೊಂಡಂತೆಯೇ ಪೌರಕಾರ್ಮಿಕರ ವಪ್ಪಾರೆಗಳಿದ್ದವು. ಅಲ್ಲಿ ಮಂಗೈ ಪುಳ್ಳೈಯು ಚರಂಡಿ ಕ್ಲೀನು ಮಾಡುವ ಪೌರ ಕಾರ್ಮಿಕ ಮೇಸ್ತ್ರಿಯಾಗಿದ್ದು ಅವನ ಪುತ್ರ ಚಿನ್ನಪಳನಿ ಪ್ರಾಥಮಿಕ ಶಾಲೆ ಪಾಸು ಮಾಡಿ ಹೈಸ್ಕೂಲು ಮುಟ್ಟುವುದೇ ಮತ್ತೊಮ್ಮೆ ತಾಯ ಗರ್ಭದಿಂದ ಬಂದಂತಾಯಿತು. ಬೆಳಗೆದ್ದವನೇ ಬೀದಿಬೀದಿಯ ಚರಂಡಿ ಕ್ಲೀನಿಂಗಿನ ಕಾಯಕದ ಮೇಲೆ ಹೋಗುತ್ತಿದ್ದ ಮೇಸ್ತ್ರಿ ಮಂಗೈ ಮಧ್ಯಾಹ್ನದ ಹೊತ್ತಿಗೆ ವಪ್ಪಾರೆ ಸೇರಿ ಮಗನತ್ತ, 'ಎನ್ನಡಾ ಪಳನಿ ಸ್ಕೂಲ್ ಪೋಯಿರೆಂದೆಯಾ' ಎಂದರೆ, 'ಹ್ಞೂ' ಎನ್ನುತ್ತಿದ್ದ. ಆದರೆ, ಪಳನಿ ಮಾತ್ರ ಶಾಲೆಯಿಂದ ವಾಪಸಾಗಿ ಎಷ್ಟೋ ಹೊತ್ತಾಗಿರುತ್ತಿತ್ತು. ಅವನ ವಪ್ಪಾರೆ ಶೆಡ್ಡು ಸ್ಮಶಾನದ ಸನಿಹವೇ ಇದ್ದುದರಿಂದ ಹೆಣಗಳ ಮೆರವಣಿಗೆ ಬರುತ್ತಿದ್ದುದನ್ನು ಕಂಡವನೇ ಕುಣಿಯಲು ಹೋಗುತ್ತಿದ್ದ. ಇದರೊಂದಿಗೆ ಪೇಟೆಯೊಳಗೆ ರಾಜಕಾರಣಿಗಳ ಚುನಾವಣೆಯ ಮೆರವಣಿಗೆಯಲ್ಲದೆ, ಹಬ್ಬಗಳಲ್ಲಿ ಮಾರಿಗುಡಿಯ ಮುಂದೆಯೂ ಅವನ ಕುಣಿತದ ಐಟಮ್ಮು ಇದ್ದೇ ಇರುತ್ತಿತ್ತು. ತಮಟೆಯ ದನಿಗೆ ನೆಲಬಿಟ್ಟು ಆಕಾಶದ ಕಡೆಗೆಂಬಂತೆ ಎದ್ದೆದ್ದು ಆಡುತ್ತಿದ್ದ ಚಿನ್ನಪಳಿನಿಯ ನೃತ್ಯ ವೈಖರಿಯನ್ನು ಕಂಡ ಹುಡುಗರು, 'ನೀ ಡ್ಯಾನ್ಸ್ ಪಣ್ಣಾ ಅದು ಸೂಪರ್‌ಸ್ಟಾರ್ ಚಂದ್ರಕಾಂತ್ ಥರಾವೇ' ಎನ್ನುತ್ತಿದ್ದರು. ಆ ಬಗೆಯ ಹೊಗಳಿಕೆಯನ್ನು ತಿರುತಿರುಗಿ ಕೇಳಿಸಿಕೊಂಡದ್ದರ ಕಾರಣವಾಗಿ ಚಿನ್ನಪಳನಿಗೆ ಎಸ್ಸೆಸ್ಸೆಲ್ಸಿಯ ಹೊಸ್ತಿಲು ದಾಟುವುದೇ ದುಸ್ತರವಾಯಿತು.

ಅವ್ವ ಕನ್ನಗಿ ಗಂಡನಿಗೆ ಮಗನ ಶಾಲಾ ಗೈರುಹಾಜರಿಯ ಬಗ್ಗೆ ದೂರು ಕೊಡಲಾಗಿ, ಮೇಸ್ತ್ರಿ ಒಂದು ರಾತ್ರಿ ಪುಸ್ತಕವನ್ನೇ ಹಿಡಿಯದ ಮಗನನ್ನು ಗದರಲು, ಪಳನಿಯೂ ತಿರುಗಿಬಿದ್ದ. 'ನೀನು ಹಾಕಿರುವ ಪಳ್ಳಿಕೂಟಂ ಯಾವ ಥರದ್ದು ಗೊತ್ತಾ? ಅಲ್ಲಿ ಇಂಗ್ಲಿಷೇ ಹೇಳಿಕೊಡುವುದಿಲ್ಲ. ಎಲ್ಲ ಬರೀ ತಮಿಳು. ಅದು ನನಗೇ ಬರುತ್ತದಲ್ಲಾ, ಅಲ್ಲಿ ಹೋಗಿ ಏನು ಕಲಿಯಲಿ. ಎಲ್ಲರೂ ನನ್ನಥರಾ ಈ ಏರಿಯಾದಲ್ಲಿ ಡ್ಯಾನ್ಸು ಮಾಡುವವರೇ ಇಲ್ಲ, ಮೊದಲು ಚೆನ್ನೈಗೆ ಬಸ್ಸು ಹಿಡಿ, ಆದಷ್ಟು ಬೇಗ ನೀನು ಸಿನಿಮಾಕ್ಕೆ ಸೇರಿಬಿಡು ಅನ್ನುತ್ತಿದ್ದಾರೆ' ಎಂದ. 'ನನ್ನನ್ನು ಇದೀಗಲೇ ಕಾನ್ವೆಂಟ್ ಶಾಲೆಗೆ ಸೇರಿಸು, ಇಂಗ್ಲಿಷ್ ಕಲಿತು ಮದರಾಸಿಗೆ ಹೋಗುತ್ತೇನೆ. ಅಲ್ಲಿ ಸಿನಿಮಾ ಸ್ಟಾರ್‌ಗಳು ಸಿಕ್ಕಿದರೆ ಅವರ ಮುಂದೆ ಇಂಗ್ಲಿಷ್‌ನಲ್ಲಿ ಮಾತಾಡಬೇಕಲ್ಲ, ತಮಿಳಲ್ಲಿ ಮಾತಾಡಿದರೆ ಏನು ಬೆಲೆ' ಎಂದು ಅಪ್ಪನಿಗೆ ದಬಾಯಿಸಿದ.

ಮಗನ ಈ ಥರದ ಭವಿಷ್ಯ ಚಿಂತನೆಯಿಂದ ಆನಂದತುಂದಿಲಳಾದ ಅವ್ವ ಕನ್ನಗಿಯು ಮಗನ ಅಭಿಪ್ರಾಯವನ್ನೇ ಸಮರ್ಥಿಸಿದಳು. ಸಿಟ್ಟು ಹತ್ತಿದ ಪುತ್ರನಿಗೆ